**ತಾನು ಇರುವಷ್ಟೂ ದಿನ ಹೆಂಡತಿಯ ಸಮಾಧಿಯನ್ನು ಗುಡಿಸಿ ಸಾರಿಸುತ್ತ, ಅವಳೇ ಬೆಳಸಿದ್ದ ಹೂಗಿಡಗಳಲ್ಲಿ ಇನ್ನೂ ಉಸಿರಿಡಿದುಕೊಂಡಿದ್ದ ಗಿಡಗಳಿಂದ ಹೂಗಳನ್ನೆತ್ತಿ ಸಮಾಧಿಯ ಮೇಲಿಟ್ಟು ಅದನ್ನೇ ದಿಟ್ಟಿಸುತ್ತಾ ಗಂಟೆಗಟ್ಟಲೇ ಕೂತುಬಿಡುತ್ತಿದ್ದ ಮನವಾಳನ್. ಪೂಂಗೊಡಿ ಬಲು ಆಸ್ಥೆಯಿಂದ ತಂದು ನೆಟ್ಟಿದ್ದ ಹಣ್ಣಿನ ಗಿಡಗಳ ಸಾಮೀಪ್ಯದಲ್ಲಿ ಮತ್ತಷ್ಟು ಹೊತ್ತು ಕಳೆಯುತ್ತಿದ್ದ...**

ಅಲ್ಲಿಂದ ಜಾಗ ಖಾಲಿ ಮಾಡಲೇಬೇಕಾಗಿ ಬಂದಾಗ ತನ್ನ ಎರಡೆಕರೆ ಹೊಲವನ್ನು 'ಇದ್ರೊಳ್ಗೆ ನೀನು ಬೇಕಾದ್ದ ಬೆಳ್ಕೋ, ನಂಗೆ ಅದ್ರಾಗೆ ಏನೂ ಕೊಡ್ಬೇಡ, ಆದ್ರೆ ಆ ಸಮಾಧೀನ ಮಾತ್ರ ಮುಕ್ಕಾಗ್ದಂಗೆ ನೋಡ್ಕೋ' ಅಂತ ಅವನ ಸುಪರ್ದಿಗೆ ಒಪ್ಪಿಸಿ ಹೋಗಿದ್ದ. ಅದು ಹೆಂಗಿದ್ರೂ ಆದಾಯದ ಬಾಬತ್ತು ಅಂತ ಗೊತ್ತಿದ್ದ ಗುರ್ಸಿದ್ಧನೂ ದೂಸ್ರಾ ಮಾತಾಡದೆ ಹಂಗೇ ಆಗಲಿ ಅಂದಿದ್ದ. ಕೊಟ್ಟ ಮಾತಿನಂತೆ ತನ್ನ ಅಪ್ಪ ಅಲ್ಲಿ ಇರುವವರೆಗೂ ಹೊಲದಲ್ಲಿ ಅದೂ ಇದೂ ಬೆಳೆಯುತ್ತಿದ್ದ. ಈ ಮುಂಚೆಯೇ ಮನವಾಳನ್ ಹಾಕಿಸಿದ್ದ ಬೇಲಿಯನ್ನು ಆಗಾಗ ನೇರ್ಪು ಮಾಡಿಕೊಳ್ಳುತ್ತಿದ್ದ. ಆದರೆ ಅವನ ಅಪ್ಪನಿಗೆ ನಿವೃತ್ತಿಯಾಗಿ ತಮ್ಮ ಹಳ್ಳಿಗೆ ಹೋದ ಮೇಲೆ ಹೊಲದ ಮೇಲಿನ ಒಲವು ದಿನದಿಂದ ದಿನಕ್ಕೆ ಕರಗುತ್ತಾ ಬಂದಿತ್ತು. ಕಡೆಗದು ಬರಬರುತ್ತಾ ಮಳೆ ಬಿದ್ದಾಗ ರಾಗಿಯನ್ನೋ ಜೋಳವನ್ನೋ ಚೆಲ್ಲಿ ಬರುವಷ್ಟಕ್ಕೆ, ಮತ್ತೆ ಕಟಾವಿಗೆ ಬಂದಾಗ ಕೊಯ್ಲಿಗೆ ಮಾತ್ರ ಅತ್ತ ಹೋಗುವಷ್ಟಕ್ಕೆ ಬಂದು ನಿಂತಿತ್ತು. ಆದ ಕಾರಣ ಒಂದೆರಡು ವರ್ಷಗಳಲ್ಲಿ ಹೊಲ ಅಲಾಕಾಗತೊಡಗಿತ್ತು. ಅದಕ್ಕೆ ಹಾಕಿದ್ದ ಬೇಲಿಯೂ ತಾತತೂತವಾಗಿ ಹೋಗಿತ್ತು. ಹೇಳುವವರು ಕೇಳುವವರು ಇಲ್ಲವೆಂದ ಕೂಡಲೇ ದನಕರುಗಳ ಲೇವಡಿ ಶುರುವಾಗಿತ್ತು. ಆದಂಗೆ ಆಗ್ಲಿ ಮಾದಪ್ಪನ ಜಾತ್ರೆ, ಅಷ್ಟಕ್ಕೂ ತಾನು ಕಳಕೊಳ್ಳಬೇಕಾದ್ದು ಏನಿದೆ ಅನ್ನುವಂಥ ನಿರಾಳಕ್ಕೂ ಬಂದುಬಿಟ್ಟಿದ್ದ ಗುರ್ಸಿದ್ಧ. ಮನವಾಳನ್ ಹತ್ತು ವರ್ಷಗಳಿಂದ ಭಾರತಕ್ಕೆ ಬಾರದಿದ್ದುದು, ಹೊಲದ ಬಗ್ಗೆ ಕ್ಯಾರೆ ಕೆತ್ತ ಅನ್ನದಿದ್ದದ್ದೂ, ಗುರ್ಸಿದ್ಧನ ಅಂಥ ದಿವ್ಯ ನಿರ್ಲಕ್ಷ್ಯಕ್ಕೆ ಮತ್ತೊಂದು ಕಾರಣವಾಗಿತ್ತು. ಅದಕ್ಕಾಗೇ ಯೇಜೀಪು ಹಾಕಿಕೊಂಡಿದ್ದ ಪಕ್ಕದ ಹೊಲದವನು ಇದೇ ಪಾಡಾದ ಸಮಯ ಅಂದುಕೊಂಡು ಅದೊಂದು ದಿನ ತನ್ನ ಹೊಲದ ಜೊತೆಗೆ ಮನವಾಳನ್‌ನ ಹೊಲವನ್ನೂ ಒತ್ತರಿಸಿಕೊಂಡು ಬಂದೋಬಸ್ತಾದ ಬೇಲಿಯನ್ನು ಹಾಕಿಕೊಂಡುಬಿಟ್ಟಿದ್ದ. ಸಾಲದ್ದಕ್ಕೆ ಅದರೊಳಗಿದ್ದ ಮನವಾಳನ್‌ನ ಹೆಂಡತಿ ಪೂಂಗೊಡಿಯ ಸಮಾಧಿಯನ್ನೂ, ಗುಡಿಸಲನ್ನೂ ನೆಲಸಮ ಮಾಡಿಬಿಟ್ಟಿದ್ದ. ಇದಕ್ಕೆ ತಕರಾರು ತೆಗೆದಿದ್ದ ಗುರ್ಸಿದ್ಧನಿಗೆ 'ಇದೇನು ನಿಮ್ಮಪ್ಪನ ಚಪ್ಪೋಡ, ನಿಂದು ಅನ್ನಾಕೆ ಏನೈತೆ ನಿಂತಾವ ದಾಖ್ಲೆ, ಈಗಿದು ನಂದು ಅಷ್ಟೇಯಾ, ಅದೇನ್ ಕಿತ್ಕಂತೀಯ ಕಿತ್ಕೋ ಹೋಗು' ಅಂತ ಗುರಾಯಿಸಿದ್ದ. ಪಿಗ್ಗಿ ಬಿದ್ದಿದ್ದ ಗುರ್ಸಿದ್ಧ ಅದನ್ನು ಮನವಾಳನ್ ಕಿವಿಗಾಕಿ ಒಮ್ಮೆ ಬಂದು ಹೋಗುವಂತೆ ದುಂಬಾಲು ಬಿದ್ದಿದ್ದ.

ಗುರ್ಸಿದ್ಧ ಕಿವಿಗಾಕಿದ್ದ ಮಾತುಗಳು ಮನವಾಳನ್‌ನನ್ನು ದಿಕ್ಕೆಡಿಸಿದ್ದವು. ಅಷ್ಟೊಂದು ವರ್ಷ ಅತ್ತ ಹೋಗದೇ ತಪ್ಪು ಮಾಡಿಬಿಟ್ಟೆನಾ ಅನ್ನುವಂಥ ಕೊರಗಿಗೆ ತಳ್ಳಿದ್ದವು. ಹೊಲ ಒತ್ತುವರಿಯಾಗಿದ್ದಕ್ಕಿಂತಲೂ ಹೆಂಡತಿಯ ಸಮಾಧಿ ನೆಲಸಮವಾಗಿದ್ದು, ಅವನನ್ನು ಹೆಚ್ಚು ಕೊರೆಯತೊಡಗಿತ್ತು. ಹಾಗಾಗಿ ನಡೆದದ್ದನ್ನೆಲ್ಲಾ ಮಕ್ಕಳ ಕಿವಿಗಾಕಿ, ಅಲ್ಲಿಗೆ ಹೋಗಿ ಬರುವ